# ಮತ್ತೆ ಬರುತ್ತಿದೆ ಜಾವಾ!

■ ನೇಸರ ಕಾಡನಕುಪ್ಪೆ








ಐಡಿಯಲ್ ಜಾವಾ, ಯೆಜ್ಡಿ.. ರಸ್ತೆ ನಡುಗಿಸುತ್ತ, ಕಿವಿಗಡಚಿಕ್ಕುವಂತೆ ಸದ್ದು ಮಾಡುತ್ತ ಚಲಿಸುತ್ತಿದ್ದ ಈ ಬೈಕ್‌ಗಳು ವಿಶ್ವದಲ್ಲೇ ಪ್ರಸಿದ್ಧಿ ಪಡೆದಿದ್ದವು.

ಜೆಕೊಸ್ಲೊವೊಕಿಯಾ ಮೂಲದ 'ಜಾವಾ' ಹೆಸರಿನ ಬೈಕ್‌ಗಳು ಪ್ರಾಗ್‌ನಲ್ಲಿ 1929ರಲ್ಲಿ ಉತ್ಪಾದನೆ ಆರಂಭಿಸಿ ಯುದ್ಧದಲ್ಲಿ ಬಳಕೆಯಾಗಿದ್ದವು. 150 ರಾಷ್ಟ್ರಗಳಿಗೆ ರಫ್ತಾಗುತ್ತಿದ್ದವು. ಇಂತಹ ಬೈಕ್‌ಗಳನ್ನು ಮೈಸೂರು ಮೂಲದ ಇರಾನಿ ಕುಟುಂಬವು 1960ರಲ್ಲಿ 'ಐಡಿಯಲ್ ಜಾವಾ ಸಿಜೆಡ್' ಹೆಸರಿನಲ್ಲಿ ಉತ್ಪಾದನೆಯನ್ನು ಆರಂಭಿಸಿದವು. ನಾಲ್ಕು ದಶಕಗಳ ಕಾಲ ರಸ್ತೆ ರಾಜಣಮತೆ ಮೆರೆದ ಬೈಕ್‌ಗಳಿವು. ನಂತರ ಕಂಪೆನಿಯು 'ಯೆಜ್ಡಿ' ಎಂಬ ಹೆಸರಿನಲ್ಲಿ ತನ್ನ ಹೆಸರು ಬದಲಿಸಿಕೊಂಡಿತು. ಆದರೆ, ಆಂತರಿಕ ಸಮಸ್ಯೆಗಳನ್ನು ಎದುರಿಸಿ 1996ರಲ್ಲಿ ಕಂಪೆನಿ ಮುಚ್ಚಿಹೋಯಿತು.

ಇಷ್ಟಾದರೂ, ಜಾವಾ ಹಾಗೂ ಯೆಜ್ಡಿ ಬೈಕ್‌ಗಳು ಜನಮಾನಸದಿಂದ ಮಾಸಿರಲಿಲ್ಲ. ಅದರಲ್ಲೂ ಮೈಸೂರು, ಕೊಡಗು, ಚಿಕ್ಕಮಗಳೂರಿನಲ್ಲಿ ಯೆಜ್ಡಿ ಬೈಕುಗಳೆಂದರೆ ಯುವಕರಿಗೆ ಈಗಲೂ ಪ್ರಾಣ. ಬೆಂಗಳೂರಿನಲ್ಲೂ ಅಭಿಮಾನಿಗಳಿದ್ದಾರೆ. ಪ್ರತಿವರ್ಷ ಜುಲೈ 10ರಂದು 'ಅಂತರರಾಷ್ಟ್ರೀಯ ಜಾವಾ ದಿನ'ವನ್ನು ಬೆಂಗಳೂರು, ಮೈಸೂರು ಸೇರಿದಂತೆ ದೇಶ, ವಿದೇಶಗಳಲ್ಲಿ ಆಚರಿಸುವ ಸಂಘಟನೆಗಳಿವೆ. ಈ ಬೈಕ್‌ಗಳಿಗೆ 'ಆ್ಯಂಟಿಕ್' ಬೆಲೆ ಬಂದಾಗಿನಿಂದ ಲಕ್ಷ ಲಕ್ಷ ರೂಪಾಯಿಗಳಿಗೆ ಹಳೆಯ ಜಾವಾ, ಯೆಜ್ಡಿ ಬೈಕ್‌ಗಳನ್ನು ಕೊಳ್ಳುವವರ ಸಂಖ್ಯೆಯೂ ಹೆಚ್ಚಿದೆ.

ಕಂಪೆನಿ ಮುಚ್ಚಿದ ಮೇಲೂ ಜಾವಾ, ಯಜ್ಡಿ ಬೈಕ್‌ಗಳ ಖ್ಯಾತಿ ಹೆಚ್ಚುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿರುವ 'ಮಹಿಂದ್ರಾ ಟೂ ವೀಲರ್ಸ್' ಕಂಪೆನಿಯು ಇದೀಗ ಜಾವಾ ಉತ್ಪಾದನೆ ಹಾಗೂ ಮಾರಾಟ ಹಕ್ಕುಗಳನ್ನು ಜೆಕ್ ರಿಪಬ್ಲಿಕ್‌ನ ಟೈನೆಕ್ ನಾಡ್ ಸಜಾವೂ ಪಟ್ಟಣದಲ್ಲಿರುವ 'ಜಾವಾ ಮೊಟೊ'ದಿಂದ ಖರೀದಿಸಿದ್ದಾರೆ. ಈಗಾಗಲೇ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯ ಆರಂಭಿಸಿರುವ ಮಹಿಂದ್ರಾ ಕಂಪೆನಿ ಯಾವ್ಯಾವ ಮಾದರಿಗಳನ್ನು ಬಿಡುಗಡೆಗೊಳಿಸಬೇಕು, ಹಿಂದೆ ಭಾರತದಲ್ಲಿ ಉತ್ಪಾದನೆಗೊಳ್ಳುತ್ತಿದ್ದ ಬೈಕ್‌ಗಳು ಹೇಗಿದ್ದವು, ಅವುಗಳ ಪ್ರಸಿದ್ಧಯ ಮಟ್ಟ ಹೇಗಿತ್ತು ಎಂಬಿತ್ಯಾದಿ ಮಾಹಿತಿಯನ್ನು ಕಲೆಹಾಕತೊಡಗಿದೆ.

## 2018ಕ್ಕೆ ಬರಲಿವೆ ಬೈಕ್

ಮಧ್ಯಪ್ರದೇಶದಲ್ಲಿರುವ ಪೀತಾಂಪುರದಲ್ಲಿರುವ ಮಹಿಂದ್ರಾ ದ್ವಿಚಕ್ರವಾಹನ ಕಾರ್ಖಾನೆಯಲ್ಲಿ ಜಾವಾ ಬೈಕ್‌ಗಳನ್ನು ಉತ್ಪಾದನೆ ಮಾಡಲಾಗುವುದು ಎಂದು ಮಹಿಂದ್ರಾ ಅಧಿಕೃತವಾಗಿ ಪ್ರಕಟಿಸಿದೆ. 2018ಕ್ಕೆ ಬೈಕ್‌ಗಳನ್ನು ಮಾರಾಟಕ್ಕೆ ಬಿಡುಗಡೆಗೊಳಿಸುವುದಾಗಿ ಹೇಳಿದೆ.

'ಜಾವಾ' ಬೈಕ್‌ಗಳಲ್ಲಿ ಸಾಮಾನ್ಯವಾಗಿ 250 ಸಿಸಿ ಎಂಜಿನ್ ಇರುತ್ತಿದ್ದವು. 2 ಸ್ಟ್ರೋಕ್ ಎಂಜಿನ್‌ನ, ಸಿಂಗಲ್ ಹೆಡ್; ಆದರೆ, ಎರಡು ಹೊಗೆಕೊಳವೆ ಇರುತ್ತಿದ್ದ ಬೈಕ್‌ಗಳವು. ಈಗ ಹೊರಬರುವ ಬೈಕ್‌ಗಳಲ್ಲಿ ಎರಡು ಹೊಗೆ ಕೊಳವೆ ಇರುತ್ತದಾದರೂ, 2 ಸ್ಟ್ರೋಕ್ ಎಂಜಿನ್ ಬದಲಿಗೆ 4 ಸ್ಟ್ರೋಕ್ ಎಂಜಿನ್ ಇರಲಿದೆ. 'ಜಾವಾ ಮೊಟೊ' ಬಳಿ 2006ರವರೆಗೂ 250, 150 ಹಾಗೂ 50 ಸಿಸಿಯ ಬೈಕ್‌ಗಳನ್ನು ಮಾತ್ರ ತಯಾರು ಮಾಡಲಾಗುತ್ತಿತ್ತು. ಇದೀಗ 650 ಸಿಸಿಯ ಬೈಕ್‌ಗಳನ್ನು ತಯಾರಿಸಲಾಗುತ್ತಿದೆ. 350 ಸಿಸಿಯ ಬೈಕ್‌ಗಳನ್ನೂ ಜಾವಾ ತಯಾರಿಸುತ್ತಿದೆ. ಈಗಾಗಲೇ ತಯಾರಿಯಲ್ಲಿರುವ ಮಾದರಿಗಳನ್ನು ಭಾರತಕ್ಕೆ ಪರಿಚಯಿಸುವುದು ಮಹಿಂದ್ರಾದ ಉದ್ದೇಶವಲ್ಲ. ಬದಲಿಗೆ, ಭಾರತದಲ್ಲಿದ್ದ ಐಡಿಯಲ್ ಜಾವಾ ಬೈಕ್‌ಗಳ ಮಾದರಿಗಳನ್ನು ಸದ್ಯ ಪರಿಚಯಿಸುತ್ತಿದೆ.

## ಆ ಮಾದರಿಗಳು

'ಜಾವಾ 250' ಮೊದಲ ಮಾದರಿ. 1960ರಲ್ಲಿ ನೇರವಾಗಿ ಜೆಕ್ ರಿಪಬ್ಲಿಕ್‌ನಿಂದ ಆಮದು ಮಾಡಿಕೊಳ್ಳುತ್ತಿದ್ದ ಬೈಕ್. ಇದನ್ನು ಅಂದಿನ